ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ನೃಪತುಂಗ ರಸ್ತೆ,
ಬೆಂಗಳೂರು-560001.

ಸಂಖ್ಯೆ:- ತ(1)/ತ.ಪ.ಮಾ/22/2010-2011 ದಿನಾಂಕ;16-12-2011

-; ಸುತ್ತೋಲೆ ;-

ವಿಷಯ;-ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಜಿಲ್ಲೆಗೆ
ಒಬ್ಬರಂತೆ ನೋಡೆಲ್ ಅಧಿಕಾರಿಗಳನ್ನು ನೇಮಿಸಿರುವ ಬಗ್ಗೆ
ಉಲ್ಲೇಖ;- ಸರ್ಕಾರದ ಆದೇಶ ಸಂಖ್ಯೆ:-ಇಡಿ10/ಮಾಹಿತಿ2010/ಬೆಂಗಳೂರು
ದಿನಾಂಕ;14-12-2011.

***

ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ರಾಜ್ಯದ ಜಿಲ್ಲೆಗಳಲ್ಲಿನ ಶೈಕ್ಷಣಿಕ ಚಟುವಟಿಕೆಗಳನ್ನು ರಚನಾತ್ಮಕವಾಗಿ ಅನುಷ್ಠಾನಗೊಳಿಸಲು ಹಾಗೂ ಮೇಲ್ದರ್ಜೆಗೇರಿಸಲು ಇಲಾಖೆಯ ಹಿರಿಯ ಅಧಿಕಾರಿಗಳನ್ನು ಜಿಲ್ಲೆಗೆ ಒಬ್ಬರಂತೆ ನೋಡೆಲ್ ಅಧಿಕಾರಿಗಳನ್ನು ನೇಮಿಸಿ ಇವರುಗಳು ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಸೂಚನೆ/ಮಾರ್ಗದರ್ಶನ ನೀಡಿದೆ. (ಪ್ರತಿ ಲಗತ್ತಿಸಿದೆ)

ಈ ಆದೇಶವನ್ನು ನಿಮ್ಮ ಗಮನಕ್ಕೆ ತರಬಯಸುತ್ತಾ ನಿಗಧಿ ಪಡಿಸಿದ ಗುರಿಗಳನ್ನು ಸಾಧಿಸಲು ಹಾಗೂ ರಚನಾತ್ಮಕವಾಗಿ ಅನುಷ್ಠಾನಗೊಳಿಸಲು ತಮಗೆ ವಹಿಸಿದ ಜಿಲ್ಲೆಗಳಿಗೆ ಸರ್ಕಾರದ ಸೂಚನೆ/ ಮಾರ್ಗದರ್ಶನದಂತೆ ಕಡ್ಡಾಯವಾಗಿ ಈ ಕೆಳಗೆ ಕಾಣಿಸಿದಂತೆ ಪ್ರವಾಸ ಕೈಗೊಂಡು ಸೂಕ್ತ ಮಾರ್ಗದರ್ಶನ ಮತ್ತು ಸಲಹೆ ಸೂಚನೆಗಳನ್ನು ನೀಡುವುದು.

(1) ಜನವರಿ, ಫೆಬ್ರವರಿ, ಮತ್ತು ಮಾರ್ಚ್-12 ರಲ್ಲಿ ಪ್ರತಿ 15 ದಿವಸಕ್ಕೊಮ್ಮೆ ನಿಯೋಜಿತ ಜಿಲ್ಲೆಗಳಿಗೆ ಬೇಟಿ ನೀಡಿ ಪ್ರಗತಿ ಪರಿಶೀಲಿಸಿ ಒಂದು ವಾರದೊಳಗಾಗಿ ಆಯಾ ಆಯುಕ್ತಾಲಯಕ್ಕೆ ವರದಿ ನೀಡುವುದು.

(2) ಮಾರ್ಚ್-12 ರ ನಂತರ ಪ್ರತಿ ತಿಂಗಳಿಗೊಮ್ಮೆ ನಿಗಧಿಪಡಿಸಿದ ಜಿಲ್ಲೆಗೆ ಬೇಟಿ ನೀಡಿ ಪ್ರತಿ ತಿಂಗಳ 10 ನೇ ತಾರೀಖಿನ ಒಳಗಾಗಿ ಆಯುಕ್ತಾಲಯಕ್ಕೆ ವರದಿ ನೀಡುವುದು.

( ತುಷಾರ್ ಗಿರಿ ನಾಥ್ )
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.
ಬೆಂಗಳೂರು

1. ಪ್ರತಿಯನ್ನು ಸಂಬಂಧಿಸಿದ ನೋಡೆಲ್ ಅಧಿಕಾರಿಗಳಿಗೆ ತ್ವರಿತ ಕ್ರಮಕ್ಕಾಗಿ ಕಳುಹಿಸಿದೆ.
2. ಆಯುಕ್ತರ ಆಪ್ತ ಶಾಖೆಗೆ.
3. ಕಚೇರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| **ವಿಷಯ** | ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಜಿಲ್ಲೆಗೆ ಒಬ್ಬರಂತೆ ನೋಡಲ್ ಅಧಿಕಾರಿಗಳಾಗಿ ನೇಮಿಸುವ ಬಗ್ಗೆ. |
| **ಓದಲಾಗಿದೆ** | 1. ಸರ್ಕಾರಿ ಆದೇಶ ಸಂಖ್ಯೆ: ಇಡಿ 375 ಯೋಯೋಕ 2007 ದಿನಾಂಕ: 14.11.2007<br>2. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 111 ಡಿಎಆರ್ 2010 ದಿನಾಂಕ 30.08.2010<br>3. ಸರ್ಕಾರಿ ಆದೇಶ ಸಂಖ್ಯೆ: ಇಡಿ 10 ಮಾಹಿತಿ 2010 ದಿನಾಂಕ: 16.09.2010<br>4. ಅಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪ್ರಸ್ತಾವನೆ ಸಂಖ್ಯೆ: ತ(1).ತಪಮಾ.22/2010-11 ದಿನಾಂಕ: 07.12.2011 |

ಪ್ರಸ್ತಾವನೆ:

1. ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಅದೇಶದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಶೈಕ್ಷಣಿಕ ಜಿಲ್ಲೆಗಳಲ್ಲಿ ವಿವಿಧ ಯೋಜನೆಯಡಿ ಸಾಧಿಸಿರುವ ಪ್ರಗತಿಯನ್ನು ಮಾಸಿಕವಾಗಿ ಪರಿಶೀಲಿಸಲು ಜಿಲ್ಲೆಗೆ ಒಬ್ಬರಂತೆ ನೋಡಲ್ ಅಧಿಕಾರಿಗಳನ್ನು ನೇಮಿಸಿ ಆದೇಶ ಹೊರಡಿಸಲಾಗಿತ್ತು.
2. ಮೇಲೆ (2) ಮತ್ತು (3) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹಿಂದುಳಿದ ಶೈಕ್ಷಣಿಕ ಜಿಲ್ಲೆಗಳನ್ನು ಶೈಕ್ಷಣಿಕವಾಗಿ ಮೇಲ್ದರ್ಜೆಗೆ ತರಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ಸಕ್ರಿಯವಾಗಿ ಕಾರ್ಯನಿರ್ವಹಿಸಲು ಸೂಚಿಸಲಾಗಿತ್ತು.
3. ಮೇಲೆ (4)ರಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರು (1) ಮತ್ತು (2)ರಲ್ಲಿನ ಸೂಚನೆ ಹಾಗೂ ಉದ್ದೇಶಕ್ಕಾಗಿ ಅನುಬಂಧದಲ್ಲಿರುವಂತೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಿ ಪರಿಷ್ಕೃತ ಅದೇಶ ಹೊರಡಿಸಲು ಕೋರಿರುತ್ತಾರೆ.
4. ಮೇಲ್ಕಂಡ (4) ರಲ್ಲಿನ ಕೋರಿಕೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು ಅದರಂತೆ ಈ ಕೆಳಕಂಡಂತೆ ಪರಿಷ್ಕೃತ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 10 ಮಾಹಿತಿ 2010, ಬೆಂಗಳೂರು ದಿನಾಂಕ: 14.12.2011**

5. ರಾಜ್ಯದ ಶೈಕ್ಷಣಿಕ ಜಿಲ್ಲೆಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ರಚನಾತ್ಮಕವಾಗಿ ಅನುಷ್ಠಾನಗೊಳಿಸಲು ಹಾಗೂ ಮೇಲ್ದರ್ಜೆಗೇರಿಸಲು ಈ ಕೆಳಕಂಡ ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಅವರ ಹೆಸರಿನ ಮುಂದೆ ತೋರಿಸಿರುವ ಜಿಲ್ಲೆಗಳಿಗೆ ನೋಡಲ್ ಅಧಿಕಾರಿಗಳಾಗಿ ನೇಮಿಸಿದೆ.

| ಕ್ರ. ಸಂ | ಅಧಿಕಾರಿಯ ಪದನಾಮ | ಜಿಲ್ಲೆ |
|---|---|---|
| 1. | ಅಪರ ನಿರ್ದೇಶಕರು, ಆಯುಕ್ತರ ಕಚೇರಿ, ಬೆಂಗಳೂರು | ತುಮಕೂರು, ಮಧುಗಿರಿ |
| 2. | ಅಪರ ಆಯುಕ್ತರು, ಧಾರವಾಡ | ಬೆಳಗಾವಿ, ಚಿಕ್ಕೋಡಿ |
| 3. | ಅಪರ ಆಯುಕ್ತರು, ಗುಲ್ಬರ್ಗ | ಗುಲ್ಬರ್ಗ, ಯಾದಗಿರಿ |

| | | |
|---|---|---|
| 4. | ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ | ದಕ್ಷಿಣ ಕನ್ನಡ, ಉಡುಪಿ |
| 5. | ನಿರ್ದೇಶಕರು, ಪ್ರಾಥಮಿಕ ಶಿಕ್ಷಣ | ಕೋಲಾರ, ಚಿಕ್ಕಬಳ್ಳಾಪುರ |
| 6. | ನಿರ್ದೇಶಕರು, ಪ್ರೌಢ ಶಿಕ್ಷಣ | ಬೆಂಗಳೂರು ಉತ್ತರ & ಬೆಂಗಳೂರು ದಕ್ಷಿಣ |
| 7. | ನಿರ್ದೇಶಕರು, ಕೆ.ಎಸ್.ಇ.ಇ.ಬಿ | ಬಿಜಾಪುರ, ಬಾಗಲಕೋಟೆ |
| 8. | ನಿರ್ದೇಶಕರು, ಇತರೆ ಪರೀಕ್ಷೆಗಳು | ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಮನಗರ |
| 9. | ನಿರ್ದೇಶಕರು, ಆರ್ಎಂಎಸ್ಎ, ಬೆಂಗಳೂರು | ಮೈಸೂರು, ಚಾಮರಾಜನಗರ |
| 10. | ನಿರ್ದೇಶಕರು, ಡಿಎಸ್ಇಆರ್ಟಿ | ರಾಯಚೂರು,ಕೊಪ್ಪಳ |
| 11. | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸೊಸೈಟಿ | ಮಂಡ್ಯ |
| 12. | ನಿರ್ದೇಶಕರು, ಅಲ್ಪಸಂಖ್ಯಾತ ಶಾಲೆಗಳು | ಚಿಕ್ಕಮಗಳೂರು |
| 13. | ನಿರ್ದೇಶಕರು,SISLEP, ಧಾರವಾಡ | ಉತ್ತರ ಕನ್ನಡ, ಶಿರಸಿ |
| 14. | ನಿರ್ದೇಶಕರು, ಅಪರ ಆಯುಕ್ತರ ಕಚೇರಿ, ಧಾರವಾಡ | ಗದಗ ಹಾವೇರಿ |
| 15. | ನಿರ್ದೇಶಕರು, ಅಪರ ಆಯುಕ್ತರ ಕಚೇರಿ, ಗುಲ್ಬರ್ಗ | ಬೀದರ್ |
| 16. | ಸಹ ನಿರ್ದೇಶಕರು, ಶಾಲಾ ಶಿಕ್ಷಣ, ಆಯುಕ್ತರ ಕಚೇರಿ, ಬೆಂಗಳೂರು | ಕೊಡಗು |
| 17. | ಸಹ ನಿರ್ದೇಶಕರು, ಮದ್ಯಾಹ್ನ ಉಪಹಾರ ಯೋಜನೆ | ದಾವಣಗೆರೆ |
| 18. | ಸಹ ನಿರ್ದೇಶಕರು, ಡಿಎಸ್ಇಆರ್ಟಿ | ಹಾಸನ |
| 19. | ಸಹ ನಿರ್ದೇಶಕರು, ಅಪರ ಆಯುಕ್ತರ ಕಚೇರಿ, ಗುಲ್ಬರ್ಗ | ಬಳ್ಳಾರಿ |
| 20. | ಸಹ ನಿರ್ದೇಶಕರು, ಅಪರ ಆಯುಕ್ತರ ಕಚೇರಿ, ಧಾರವಾಡ | ಧಾರವಾಡ |
| 21. | ಸಹ ನಿರ್ದೇಶಕರು, ಮೈಸೂರು ವಿಭಾಗ | ಶಿವಮೊಗ್ಗ |
| 22. | ಸಹ ನಿರ್ದೇಶಕರು, ಬೆಂಗಳೂರು | ಚಿತ್ರದುರ್ಗ |

6. ಪ್ರತಿ ತಿಂಗಳು ಕಡ್ಡಾಯವಾಗಿ 5 ಶಾಲೆಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಮತ್ತು ಉಪನಿರ್ದೇಶಕರ ಕಛೇರಿಗಳಿಗೆ ಬೇಟಿ ನೀಡಿ ಗುರಿ ಮತ್ತು ಸಾಧನೆಗಳ ಕುರಿತು, ಸಾರ್ವಜನಿಕ ಅಹವಾಲುಗಳ ವಿಲೇವಾರಿ ಕುರಿತು ಕಡತ ಮತ್ತು ಪತ್ರ ನಿರ್ವಹಣೆ ತಂತ್ರಾಂಶ (ಎಲ್‌ಪಿಓ) ವರದಿಗಳ ಅಧಾರದ ಮೇರೆಗೆ ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು.

7. ಶಾಲೆಗಳಿಗೆ ಬೇಟಿ ನೀಡಿದಾಗ ಮಕ್ಕಳ ದಾಖಲಾತಿ, ಹಾಜರಾತಿ, ಕಲಿಕಾ ಗುಣಮಟ್ಟ, ಸರ್ಕಾರದ ಸೌಲಭ್ಯಗಳು ಮಕ್ಕಳಿಗೆ ನೀಡಿರುವ ಕುರಿತು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಮ್ಮುಖದಲ್ಲಿ ಸೂಕ್ತ ಸೂಚನೆಗಳನ್ನು ನೀಡುವುದು.
8. ಸಾರ್ವಜನಿಕ ಸಹಭಾಗಿತ್ವದ ಕಾರ್ಯಕ್ರಮಗಳಾದ ಕಲಿಕಾ ಆಂದೋಲನ, ಸಮುದಾಯದತ್ತ ಶಾಲೆ, ಶಾಲಾ ಅಭಿವೃದ್ಧಿಯಲ್ಲಿ ಸಾರ್ವಜನಿಕರ ಹಾಗೂ ಎಸ್‌ಡಿಎಂಸಿ ಸದಸ್ಯರನ್ನು ತೊಡಗಿಸಿಕೊಳ್ಳುವ ಕುರಿತು ಸೂಕ್ತ ಸೂಚನೆಗಳನ್ನು ನೀಡುವುದು.
9. ಸರ್ಕಾರದ ಯೋಜನೆ ಮತ್ತು ಯೋಜನೇತರ ಅನುದಾನ ಗುರಿ ಮತ್ತು ಸಾಧನೆಗಳು, ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳಾದ ಎಸ್‌ಎಸ್‌ಎ/ಆರ್‌ಎಂಎಸ್‌ಎ/ಐ.ಸಿ.ಟಿ/ ಇ–ಆಡಳಿತ/ಎಸ್‌ಸಿಪಿ/ಟಿಎಸ್‌ಪಿ ಹಾಗೂ ಎಸ್‌ಡಿಪಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಯನ್ನು ಕಡ್ಡಾಯವಾಗಿ ನಡೆಸತಕ್ಕದ್ದು.
10. ಶೈಕ್ಷಣಿಕ ಪ್ರಗತಿಯ ಸಂಬಂಧ ಅಗತ್ಯವಿದ್ದಲ್ಲಿ ಖುದ್ದಾಗಿ ಜಿಲ್ಲೆಯ ಅಧಿಕಾರಿಗಳೊಡನೆ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರೊಡನೆ ಚರ್ಚಿಸಿ ಸೂಕ್ತ ಪರಿಹಾರವನ್ನು ಹಾಗೂ ಮಾರ್ಗದರ್ಶನ ನೀಡುವಂತೆ ಸರ್ಕಾರದ ಪರವಾಗಿ ಕೋರುವುದು.
11. ಮೇಲ್ಕಂಡ ಅಧಿಕಾರಿಗಳು ಕೆ.ಸಿ.ಎಸ್.ಆರ್ ನಿಯಮಾನುಸಾರ ಟಿಎ/ಡಿಎ ಪಡೆಯಲು ಅರ್ಹರಿರುತ್ತಾರೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು**
**ಅವರ ಹೆಸರಿನಲ್ಲಿ**

**(ಐ.ಎಫ್.ಮಾಗಿ)**
**ವಿಶೇಷಾಧಿಕಾರಿ ಹಾಗೂ ಪದನಿಮಿತ್ತ**
**ಸರ್ಕಾರದ ಅಧೀನ ಕಾರ್ಯದರ್ಶಿ**
**ಶಿಕ್ಷಣ ಇಲಾಖೆ (ಯೋಜನೆ)**

14/12/2011

ಪ್ರತಿ:

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗ
4. ಸಂಬಂಧಪಟ್ಟ ಅಧಿಕಾರಿಗಳು (ಆಯುಕ್ತರು, ಸಾಶಿಇಲಾಖೆ, ಬೆಂಗಳೂರು ರವರ ಮೂಲಕ)
5. ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
6. ಉಪನಿರ್ದೇಶಕರು, ಖಜಾನೆ ಗಣಕ ಕೇಂದ್ರ, ಖನಿಜ ಭವನ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು
7. ಉಪ ಕಾರ್ಯದರ್ಶಿ – 2, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
8. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು
9. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
10. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ರವರ ಆಪ್ತ ಕಾರ್ಯದರ್ಶಿಗಳು